(ಶ್ರೀ ಕಡಿದಾಳ್ ಮಂಜಪ್ಪ.)

ರಿನುವಂತೆ ತಿಳಿಸಿದರು. ಆದರ ಪ್ರಕಾರ ಮೈಸೂರು ಸರ್ಕಾರದವರು 1952 ರಲ್ಲಿ ಒಂದು ಸಮಿತಿ ಏರ್ಪಡಿಸಿದರು. ಆ ಸಮಿತಿ ಎಲ್ಲಾ ಅಧಿಕಾರಿಗಳನ್ನೂ ಕೂಡ ಇಂಟರ್ವ್ಯೂ ಮಾಡಿ ಅವರ ಅರ್ಹತೆಯ ವಿಚಾರದಲ್ಲಿ ಒಂದು ಪಟ್ಟಿ ತಯಾರಿಸಿತು. ಅದನ್ನು ಸರ್ಕಾರದವರು ಭಾರತ ಸರ್ಕಾರಕ್ಕೆ ಕಳುಹಿಸಿದರು.

ಶ್ರೀ ಎಂ. ಮಾದಯ್ಯ.—ಆ ಪಟ್ಟಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಲ್ಲಿ ಎಷ್ಟು ಜನರನ್ನು ಸೇರಿಸಿದೆ ?

ಶ್ರೀ ಕಡಿದಾಳ್ ಮಂಜಪ್ಪ.—7 ಅಥವಾ 8 ಜನ ಇರಬೇಕು.

ಶ್ರೀ ಎಂ. ಮಾದಯ್ಯ.—'ಎಚ್' ಭಾಗದ ಪ್ರಶ್ನೆಗೆ ಉತ್ತರವಾಗಿ 1954ನೆಯ ಇಸವಿಯ I.A.S. ಮತ್ತು I.P.S. Recruitment Rules Provision ಕಡೆಗೆ ನಮ್ಮ ಗಮನ ಸೆಳೆದಿದ್ದೀರಿ. ಆ provision ಏನು ?

ಶ್ರೀ ಕಡಿದಾಳ್ ಮಂಜಪ್ಪ.—Recruitment ಮಾಡುವಾಗ ಶೇಕಡ 12½ ಯಷ್ಟು All India basis ಮೇಲೆ ನಿಮ್ನವರ್ಗದವರಿಗೆ ಇರತಕ್ಕದ್ದು ಎಂದು ಆ provisionನಲ್ಲಿ ಹೇಳಿದೆ.

ಶ್ರೀ ಎಂ. ಮಾದಯ್ಯ.—ಈ ರೀತಿ ಮೀಸಲಾಗಿಡಲ್ಪಟ್ಟ ಸ್ಥಾನಗಳಿಗೆ merit ಮೇಲೆ ತೆಗೆದುಕೊಳ್ಳುತ್ತಾರೆಯೇ ಅಥವಾ ಇನ್ನೇನಾದರೂ basis ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—Competitive examination and merit ಎರಡನ್ನೂ ಗಮನಕ್ಕೆ ತೆಗೆದುಕೊಂಡು ಭರ್ತಿ ಮಾಡುತ್ತಾರೆ.

Mr. SPEAKER.—The Hon'ble Member has already taken ten minutes.

(SRI M. MADIAH wanted to put some more supplementaries)

Mr. SPEAKER.—You must co-operate with me. Other Members are complaining that many questions are left out. There was also a resolution on this subject discussed threadbare yesterday and the Government have replied in detail. I think the Hon'ble Member must be satisfied with that. I know that he will not be satisfied even if ten minutes more are given. But please co-operate with me.

ಶ್ರೀ ಎಂ. ಮಾದಯ್ಯ.—ಸರ್ಕಾರದವರು ಏನಾದರೂ ಪರೀಕ್ಷೆ ಏರ್ಪಡಿಸಿ ಅದರಲ್ಲಿ ತೇರ್ಗಡೆಯಾದವರನ್ನೆಲ್ಲಾ ಜಾಗ್ರತೆ ಈ cadresಗೆ ಸೇರಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ಪ್ರಾಂತ್ಯ ಸರ್ಕಾರ ಏನೂ ಮಾಡುವಹಾಗಿಲ್ಲ.

Public Service Commission (disposal of applications).

Q.—553. Sri A. MUNIYAPPA (Sidlaghatta-Chickballapur— Scheduled Castes).—

Will the Government be pleased to state :—

(*a*) the number of applications received in the Public Service Commission Office since 1952-53 to date for registration ;

(*b*) the number of applications registered ?

A.—Sri Kadidal MANJAPPA (Minister for Revenue and Public Works).—

	1952-53.	*1953-54.*
(*a*) and (*b*) Number of applications received in response to advertisement for issuing approved lists of candidates for different kinds and classes of appointments.	10,301	14,584
Number of candidates selected and assigned in the approved lists.	2,981	2,292

Note.—Applications are not received and registered for appointments. But once in a year, approved lists of candidates are issued after inviting applications for different kinds and classes of appointments.

ಶ್ರೀ ಎ. ಮುನಿಯಪ್ಪ.—ಬೇರೆ ಬೇರೆ ನೌಕರಿಗಳಿಗೆ ಈ ಹಂಚಿಕೆಯನ್ನು ಯಾವ ಆಧಾರದಮೇಲೆ ಮಾಡುತ್ತೀರಿ ?

*ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆಲ್ಲಾ recruitment rules ಇದೆ. ಅದಕ್ಕನುಗುಣವಾಗಿ ಬಂದ ಅರ್ಜಿಗಳನ್ನು ಗಣನೆಗೆ ತೆಗೆದುಕೊಂಡು ಪಬ್ಲಿಕ್ ಸರ್ವಿಸ್ ಕಮಿಷನ್ ಇದನ್ನು ನಿರ್ಧರ ಮಾಡುತ್ತದೆ.

ಶ್ರೀ ಎ. ಮುನಿಯಪ್ಪ.—ಈ ಬಗ್ಗೆ ಉಮೇದುವಾರರನ್ನು select ಮಾಡಬೇಕಾದರೆ interview ಮೂಲಕ ನಿರ್ಧರ ಮಾಡುವುದಕ್ಕೆ ಮೊದಲು ಅಥವಾ ಪರೀಕ್ಷೆಯಲ್ಲಿ ಇವರುಗಳಿಗೆ ಬಂದಿರುವ ನಂಬರುಗಳನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು, ಶಿಫಾರಸಿನ ಮೇಲೆ ಇವರುಗಳನ್ನು ಆರಿಸಿಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

Drinking water wells in Kudligi Taluk (Construction).

Q.—120. Sri K. KOTRABASAVANA GOWD (Kudligi).—

Will the Government be pleased to state :—

(*a*) the names of villages without drinking water wells in Kudligi Taluk;

(*b*) whether they will give top priority for providing drinking water wells to these villages?

A.—Sri T. CHANNIAH (Minister for Public Health and Local Self-Government).—

(*a*) The following are the villages :-

1. Dasanahalli, hamlet of Hire Kumbalakuta.
2. Yerammanahalli, hamlet of Numbalageri.
3. Linganahalli, hamlet of Gudekota.
4. Koracharahatti, hamlet of Y. L. halli.
5. Uttanahalli, hamlet of Banvikal.
6. Linganahalli, hamlet of Sidegal.
7. Nagenahalli.
8. D. Siddapuram, hamlet of Appayyanahalli.
9. Bisanahalli.
10. Badeladuku.
11. Kasapuram.
12. Gollarahatti, hamlet of Badeladuku.
13. Kenganahatti, hamlet of Kuppanakeri.
14. Narasimhagiri, hamlet of Bellikatta.
15. Nagarakatti.
16. Chinnanahalli, hamlet of Kalapur.
17. Sathanahalli, hamlet of Harkabhavi.
18. Gollarahatti, hamlet of Siddapuram.
19. Yembli.
20. Musukunahalli, hamlet of Urdihalli.
21. Karanahatti, hamlet of Hudem.

(*b*) Yes, consistent with the provision made in the Budget.

ಶ್ರೀ ಕೊಟ್ರ ಬಸವನಗೌಡ.—ತಾವು ತಿಳಿಸಿರುವ ಹಾಗೆ ಕೂಡ್ಲಿಗಿ ತಾಲ್ಲೂಕಿನ 21 ಗ್ರಾಮಗಳಿಗೆ ಯಾವಾಗ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿ ಕೊಡುವಿರಿ?

ಶ್ರೀ ಟಿ. ಚನ್ನಯ್ಯ.—ಬಳ್ಳಾರಿ ಜಿಲ್ಲೆಗೆ ಈಗಾಗಲೇ ಒಂದು ಲಕ್ಷ ಎಂಭತ್ತು ಸಾವಿರ ರೂಪಾಯಿಗಳ ಗ್ರ್ಯಾಂಟನ್ನು ಕೊಡಲಾಗಿದೆ. ಇದಲ್ಲದೆ, ಇದರ ಜೊತೆಗೆ ಒಂದು ಲಕ್ಷ 27 ಸಾವಿರ ರೂಪಾಯಿಗಳನ್ನು ಕುಡಿಯುವ ನೀರಿನ ಭಾವಿಗಳನ್ನು ತೋಡಿಸುವುದಕ್ಕಾಗಿ ಕೊಟ್ಟಿದೆ. ಈ ಹಣದಲ್ಲಿ ಕೂಡ್ಲಿಗೆ ಗ್ರಾಮಕ್ಕೂ ಹಂಚಿಕೆಯಾಗುತ್ತದೆ. ಈ ಬಗ್ಗೆ ಸಾಧ್ಯವಾದಷ್ಟು ಜಾಗ್ರತೆ ಕಾರ್ಯಕ್ರಮ ಕೈಗೊಳ್ಳುತ್ತೇವೆ.

Major Panchayet Boards in Bellary District (Conversion to Municipalities).

Q. 123.—Sri K. KOTRABASAVANA GOWD (Kudligi).—

Will the Government be pleased to state :—

when they will take steps to convert Major Panchayet Boards in Bellary District into Municipalities ?

A.—Sri T. CHANNIAH (Minister for Public Health and Local Self-Government).—

This will be considered after the Mysore Laws relating to Local Administration are extended to Bellary District.

ಶ್ರೀ ಕೊಟ್ರಬಸವನಗೌಡ.—ಬಳ್ಳಾರಿ ಜಿಲ್ಲೆಯಲ್ಲಿರುವ ಮೇಜರ್ ಪಂಚಾಯಿತಿ ಬೋರ್ಡ್‌ಗಳನ್ನು ಮುನಿಸಿಪಾಲಿಟಿಯಾಗಿ ಮಾರ್ಪಡಿಸಲು ಜಾಗ್ರತೆ ಕಾರ್ಯಕ್ರಮ ಕೈಗೊಳ್ಳುವಿರಾ ?

Sri T. CHANNIAH.—Local Administration Acts. ಬಳ್ಳಾರಿಗೆ ಅನ್ವಯವಾದನಂತರ ಈ ವಿಚಾರವನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೊಟ್ರಬಸವನಗೌಡ.—ಆ ಕಾರ್ಯ ಬಹಳ ನಿಧಾನವಾಗುತ್ತದೆಯೇ ?

ಶ್ರೀ ಟಿ ಚನ್ನಯ್ಯ.—ಆದಷ್ಟು ಜಾಗ್ರತೆಮಾಡಲು ಪ್ರಯತ್ನಪಡಲಾಗುತ್ತದೆ.

Harijans (Grants to dig wells).

Q. 152.—Sri H. T. PUTTAPPA (Hoskote-Anekal—Scheduled Castes).—

Will the Government be pleased to State : —

(*a*) the amount sanctioned to Harijans for digging wells during 1954-55 ;

(*b*) the number of wells completed and the number of wells the works of which remain incomplete ?

A.—Sri T. CHANNIAH (Minister for Public Health and Local Self-Government).—

(*a*) In the grants made available in the State Budget for rural water supply and in the amounts set apart for the purpose under the Local Development Works Scheme, no separate allotment is set apart for Harijans, but wells for them are liberally sanctioned wherever there is necessity.